KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/SSL-416/2022-23/ 539 Date: 26.11.2022

**ಸುತ್ತೋಲೆ**

ವಿಷಯ: NASSCOM ಮುಖಾಂತರ Artificial Intellegence ವಿಷಯವನ್ನು ಕಲಿಸಲು ತಮ್ಮ ಮಹಾವಿದ್ಯಾಲಯದಿಂದ ನೊಡಲ್ ಅಧಿಕಾರಿ ಎಂದು (Point of Contact-POC) ನೇಮಕ ಮಾಡುವ ಕುರಿತು.

ಉಲ್ಲೇಖ:1. Executive Director, KSHEC Bangalore ದಿನಾಂಕ: 17.11.2022.
2. ಕಚೇರಿ ಸುತ್ತೋಲೆ ಸಂ. KU/Aca(S&T)/SSL-416/2022-23/534, ದಿ. 19.11.2022.
3. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 26.11.2022.

------

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಎಲ್ಲ ಸ್ನಾತಕ ಪದವಿಗಳ [B.Sc (CS), BA (Computer Application) & B.C.A ಹೊರತುಪಡಿಸಿ] 3ನೇ ಸೆಮಿಸ್ಟರ್‌ಗೆ ನಿಗದಿಪಡಿಸಿದ Artificial Intellegence ವಿಷಯವನ್ನು NASSCOM ಮುಖಾಂತರ ಕಲಿಯಲು ಅನುಕೂಲವಾಗುವಂತೆ ತಮ್ಮ ಮಹಾವಿದ್ಯಾಲಯದಿಂದ ತಲಾ ಎರಡು (ಕನಿಷ್ಠ ಒಂದು) ಉಪನ್ಯಾಸಕರನ್ನು ನೊಡಲ್ ಅಧಿಕಾರಿ (Point of Contact-POC) ಎಂದು ನೇಮಕ ಮಾಡಲು ಈ ಮೂಲಕ ತಿಳಿಸಲಾಗಿದೆ. ಮಹಾವಿದ್ಯಾಲಯಗಳು ಇಚ್ಛಿಸಿದಲ್ಲಿ ಈಗಾಗಲೇ, Digital Fluency ವಿಷಯಕ್ಕೆ ನೊಡಲ್ ಅಧಿಕಾರಿ ಎಂದು ನೇಮಕ ಮಾಡಿದವರನ್ನು ಕೂಡ ಮುಂದುವರೆಸಬಹುದಾಗಿದೆ.

ಮುಂದುವರೆದು, ಸದರಿ ವಿಷಯಕ್ಕೆ ನೊಡಲ್ ಅಧಿಕಾರಿ ಎಂದು ನೇಮಕಗೊಂಡ ಉಪನ್ಯಾಸಕರು ಈ ಕೆಳಗಿನ Google ಅರ್ಜಿ ನಮೂನೆಯಲ್ಲಿ ತಪ್ಪದೇ ನೊಂದಾಯಿಸಿಕೊಳ್ಳುವುದು.

Google form: https://bit.ly/3DPNOuF

ಈ ಮೇಲಿನಂತೆ, ನೊಂದಾಯಿಸಿಕೊಂಡ ಸದರ ನೊಡಲ್ ಅಧಿಕಾರಿಗಳು ದಿನಾಂಕ: 01.12.2022 ರಂದು ಆನ್‌ಲೈನ್ ಮುಖಾಂತರ Future Skills Prime Portal ನಲ್ಲಿ ನೊಂದಾಯಿಸಿಕೊಂಡು Artificial Intellegence ವಿಷಯದ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು. ಸಹಾಯಕ್ಕಾಗಿ NASSCOM ಅಧಿಕಾರಿಗಳಾದ ಶ್ರೀ ದಿನೇಶಕುಮಾರ ಪಾಣಿಗ್ರಾಹಿ, Sector Skills Council, NASSCOM ಬೆಂಗಳೂರು (ಮೊ: 8019366717) ಇವರನ್ನು ಸಂಪರ್ಕಿಸಬಹುದು.

ಮುಂದುವರೆದು, ಸದರ ನೊಡಲ್ ಅಧಿಕಾರಿಗಳಿಗೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು, NASSCOM ಬೆಂಗಳೂರು ಇವರ ಸಹಯೋಗದೊಂದಿಗೆ ದಿನಾಂಕ: **02.12.2022** ರಂದು ಬೆಳಿಗ್ಗೆ 9.30 ರಿಂದ ಸಂಜೆ 4.00 ಗಂಟೆಯವರೆಗೆ ಭೌತಿಕವಾಗಿ ಒಂದು ದಿನ ತರಬೇತಿ ಕಾರ್ಯಾಗಾರವನ್ನು ಜೆ.ಎಸ್.ಎಸ್. ಕಾಲೇಜು, ವಿದ್ಯಾಗಿರಿ, ಧಾರವಾಡ ಇಲ್ಲಿ ಏರ್ಪಡಿಸಲಾಗಿದ್ದು, ಸದರಿ ಕಾರ್ಯಾಗಾರಕ್ಕೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ, ಮುಂದಿನ ಅಡೆತಡೆಗಳಿಗೆ ಮಹಾವಿದ್ಯಾಲಯದ ಪ್ರಾಚಾರ್ಯರು ಹೊಣೆಗಾರರು ಎಂದು ಈ ಮೂಲಕ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ನೊಡಲ್ ಅಧಿಕಾರಿಗಳಾದ (SPOC-Single Point of Contact) ಡಾ. ಬಿ.ಬಿ.ಬಿರಾದಾರ ಇವರ ಸಂಪರ್ಕದಲ್ಲಿದ್ದು (Cell No: 9743101299: e-mail ID: ai22sec@kud.ac.in) ಅವರ ಸಲಹೆ ಸೂಚನೆಗಳ ಪ್ರಕಾರ ಕ್ರಮಕೈಗೊಳ್ಳಬೇಕೆಂದು ತಿಳಿಸಲಾಗಿದೆ.

ಕುಲಸಚಿವರು

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

ಮು.ತಿ.ನೋ.

2. ಪ್ರೊ. ಜಯಪ್ಪ, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು (ಮೊ: 9448235042)
3. ಶ್ರೀ ದಿನೇಶಕುಮಾರ ಪಾಣಿಗ್ರಾಹಿ, ಸ್ಥಳೀಯ ಮುಖಂಡರು (Regional Lead), Sector Skills Council, NASSCOM ಬೆಂಗಳೂರು.
4. ಡಾ. ಬಿ.ಬಿ.ಬಿರಾದಾರ, SEC: Artificial Intellegence ನೊಡಲ್ ಅಧಿಕಾರಿ ಮತ್ತು ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
5. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರತಿ:

1. ನಿರ್ದೇಶಕರು, ಕಾಲೇಜು ಅಭಿವೃದ್ಧಿ ವಿಭಾಗ, ಕ.ವಿ.ವಿ. ಧಾರವಾಡ.
2. ನೊಡಲ್ ಅಧಿಕಾರಿಗಳು, UUCMS ಘಟಕ ಕ.ವಿ.ವಿ. ಧಾರವಾಡ.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಕ.ವಿ.ವಿ. ಅಂತರ್ಜಾಲ ಮುಖಾಂತರ ಬಿತ್ತರಿಸಲು ಕ್ರಮವಹಿಸುವುದು.